ಫ್ಯಾಕ್ಟರುಗಳೆಂದರೆ ಒಂಥರಾ ಅಣುಗಳು. ಅವು ಸಾಮಾನ್ಯ ಜೀವಕೋಶಗಳನ್ನು ಪ್ಲ್ಯೂರಿಪೊಟೆಂಟ್ ಸ್ಟೆಮ್ ಜೀವಕೋಶಗಳಾಗಿ ಪರಿವರ್ತಿಸ್ತವೆ'.

ಶಿವಾನಿಯ ಮುಖ ಕಗ್ಗಂಟಾಗಿತ್ತು. ಜನಾರ್ದನ್ ವಿವರಿಸಿದರು-

'ಯಮನಕಾ ಫ್ಯಾಕ್ಟರ್ ಅಂತ ಹೆಸರು ಬಂದಿರೋದು ಅದರ ಜಪಾನಿ ಸಂಶೋಧಕ, ನೊಬೆಲ್ ಪಾರಿತೋಷಕ ವಿಜೇತ ಶಿನ್ಯಾ ಯಮನಕಾರಿಂದ. ಲೆಂಟಿ ವೈರಸ್ ಅಥವಾ ರೆಟ್ರೋ ವೈರಸ್ ಕ್ಯಾರಿಯರ್‌ಗಳ ಮೂಲಕ ನಿಗದಿತ ಜೀವಕೋಶಗಳಿಗೆ ಇವನ್ನು ಇಂಜೆಕ್ಟ್ ಮಾಡ್ತಾರೆ. ಆಮೇಲೆ ಅವು ಡಿಎನ್‌ಎನಲ್ಲಿ ಇಂಟಿಗ್ರೇಟ್ ಆಗಿ ಅವುಗಳನ್ನು ಸ್ಟೆಮ್ ಜೀವಕೋಶಗಳನ್ನಾಗಿ ಪರಿವರ್ತಿಸುತ್ತವೆ, ಎಷ್ಟೋ ನಾನ್ ವೈರಲ್ ಕ್ಯಾರಿಯರ್ಸ್ ಕೂಡಾ ಇವೆ.'

'ಸರ್ ಸ್ಟೆಮ್ ಜೀವಕೋಶಗಳಾಗಿ ಬಿಟ್ಟರೆ ಮುಂದೆ?'

'ಅವುಗಳಿಗೆ ಪ್ಲೂರಿಪೊಟೆಂಟ್ ಸ್ಟೆಮ್ ಜೀವಕೋಶಗಳು ಅಂತ ಹೆಸರು, ಅವುಗಳ ವೈಶಿಷ್ಟ್ಯವೆಂದರೆ ಅವು ಯಾವುದೇ ಜೀವಕೋಶದ ಕೆಲಸ ಬೇಕಾದರೂ ಮಾಡಬಹುದು, ಉದಾಹರಣೆಗೆ ಇಸ್ಪೀಟಿನ ರಮ್ಮಿಯಾಟದ ಜೋಕರ್ ಇದ್ದಂತೆ. ಅದೊಂದು ಸಂಕೀರ್ಣ ವಿಧಾನ; ಮತ್ತೊಂದು ತಾರುಣ್ಯ ಮರಳಿಸೋ ವಿಧಾನ ಅಂತ ತಿಳ್ಕೊಂಡರೆ ಸಾಕು.'

ಹಾಡಿದ್ದನ್ನೇ ಹಾಡುವ ಜನಾರ್ದನರನ್ನು ತಡೆಯುತ್ತಾ ಶಿವಾನಿಯೆಂದಳು,

'ಸರ್ ನೀವಿದೆಲ್ಲ ಹ್ಯಾಗೆ ತಿಳ್ಕೊಂಡ್ರಿ?'

ಕೊಂಚವೇ ಹೆಗಲೇರಿಸಿದರು ಜನಾರ್ದನ್ 'ಮತ್ತೆ ವೈಜ್ಞಾನಿಕ ಪತ್ರಿಕೋದ್ಯಮಿ ಅಂದರೆ ಸುಮ್ಮನೇನಾ?'

'ಅದ್ಸರಿ ಸರ್ ಈ ವಿಧಾನಕ್ಕೆ ಭಾರಿ ವೆಚ್ಚವಾಗ್ತಿರಬಹುದಲ್ಲವೆ?'

'ಆಫ್ ಕೋರ್ಸ್, ನನ್ನ ನಿನ್ನಂಥವರಿಗಲ್ಲಾ ಇದು'

'ನಮಗೆ ಬೇಡ ಬಿಡಿ ಸರ್ ಇವೆಲ್ಲ. ಅದು ಹೋಗಲಿ ಇನ್ನು ಕೆಲ ವರ್ಷಗಳಲ್ಲಿ ಪೇಟೆಗೆ ಹೋದರೆ ಕಾಣೋದು ಎಂಥಾ ವಿಚಿತ್ರ ದೃಶ್ಯ ಗೊತ್ತಾ ಸರ್?' ಶಿವಾನಿ ಏನೋ ಕೌತುಕ ಕಂಡಂತೆ ಕುಲುಕುಲು ನಕ್ಕಳು – 'ಮುದುಕರಂತೆ ಕಾಣೋರೆಲ್ಲ ಮುದುಕರಲ್ಲ, ಯುವಕರಂತೆ ಕಾಣೋರೆಲ್ಲ ಯುವಕರಲ್ಲ, ಇನ್‌ಫ್ಯಾಕ್ಟ್ ಕೆಲವರು ಇದ್ದರೂ ಇರಬಹುದು. ಯಾಕಂದ್ರೆ ನಿಜವಾದ ಯುವಕರೂ ಯುವಕರಂತೆ ತಾನೇ ಕಾಣೋದು...'

ಟಂಗ್ ಟ್ವಿಸ್ಟರಿನಂತೆ ಬಡಬಡಿಸುತ್ತಿದ್ದ ಶಿವಾನಿ, ಜನಾರ್ದನರ ಗಂಭೀರ ಧ್ವನಿಗೆ ಒಮ್ಮೆಲೆ ಸುಮ್ಮನಾದಳು.

'ಈ ವಿಧಾನಕ್ಕೆ ಎಷ್ಟೋ ಸೈಡ್ ಇಫೆಕ್ಟ್ಸ್ ಕೂಡ ಇವೆ. ಇದೊಂಥರಾ ಎರಡಲಗಿನ ಕತ್ತಿಯಂತೆ. ಒಮ್ಮೊಮ್ಮೆ ಯಮನಕಾ ಫ್ಯಾಕ್ಟರ್ ಸೇರಿಕೊಂಡ ದೇಹದ ಜೀವಕೋಶಗಳು ತಮ್ಮ ಐಡೆಂಟಿಟಿ ಮರ್ತು ಬಿಟ್ಟು ಎರ್ರಾಬಿರ್ರಿ ವರ್ತಿಸುತ್ತವೆ'.

'ಸರ್ ಸೈಡ್ ಇಫೆಕ್ಟ್ ಏನು ಇಫೆಕ್ಟೇ ಚೆನ್ನಾಗಿಲ್ಲ. ಅಲ್ಲ ಸರ್, ಕಾಲೇಜಿನ ಎಡ್ಮಿಶನ್‌ನಲ್ಲಿ, ನೌಕರಿಯ ಇಂಟರ್ ವ್ಯೂಗಳಲ್ಲಿ ಎಂಥೆಂಥಾ ಗಡಬಡ್ ಆಗ್ಬಹುದಲ್ಲವೇ? ಐವತ್ತು ವರ್ಷದವರಿಗೆ ಸೀಟ್ ಸಿಕ್ಕು ಪಾಪ, ಬಡಪಾಯಿ ತರುಣರಿಗೆ ಸಿಗದಿರಬಹುದು'

ಇತ್ತೀಚೆಗಷ್ಟೇ ಚಿಕ್ಕ ತಮ್ಮನ ಇಂಜಿನಿಯರಿಂಗ್ ಸೀಟಿಗಾಗಿ ಪಾಡು ಪಟ್ಟ ಶಿವಾನಿಯತ್ತ ಜನಾರ್ದನ್ ಕನಿಕರದಿಂದ ನೋಡಿದರು.

'ಸರ್ ಮನೆಯಲ್ಲಿದ್ದ ಒಡವೆಗಳು, ಬೆಲೆಬಾಳುವ ಮೂರ್ತಿಗಳು, ಗ್ಯಾಜೆಟ್ಟುಗಳನ್ನು ಮನೆಯಾಳು

